ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 1-13
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ನಾಥ ಪಂಥದ ದ್ವಾದಶ ಪಂಥಗಳು (ಬಾರಹ ಪಂಥಗಳು)

**ಪಲ್ಲವಿ ಎಸ್. ಎನ್[1] ಮತ್ತು ಡಾ. ಶ್ವೇತಾರಾಣಿ ಹೆಚ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹ ಪ್ರಾಧ್ಯಾಪಕರು
ಬಿಜಿಎಸ್ ಪ್ರಥಮ ದರ್ಜೆ ಕಾಲೇಜು, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಮಂಡ್ಯ

**Abstract:**
*ನಾಥ ಪಂಥವು ಭಾರತೀಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿರುವ ಪ್ರಮುಖ ಯೋಗಪಂಥವಾಗಿದೆ. ನಾಥ ಪರಂಪರೆಯ ಬೆಳವಣಿಗೆಯಲ್ಲಿ ದ್ವಾದಶ ಪಂಥಗಳು ಅಥವಾ ಬಾರಹ ಪಂಥಗಳು ಪ್ರಮುಖ ಪಾತ್ರವಹಿಸಿವೆ. ಈ ಪಂಥಗಳು ಯೋಗಸಾಧನೆ, ಹಠಯೋಗ, ಗುರು–ಶಿಷ್ಯ ಪರಂಪರೆ ಹಾಗೂ ವೈರಾಗ್ಯಕ್ಕೆ ವಿಶೇಷ ಮಹತ್ವ ನೀಡುತ್ತವೆ. ಮತ್ಸ್ಯೇಂದ್ರನಾಥ, ಗೋರಕ್ಷನಾಥ ಮೊದಲಾದ ನಾಥಯೋಗಿಗಳ ಬೋಧನೆಗಳು ಈ ಪರಂಪರೆಯ ವಿಸ್ತರಣೆಗೆ ಪ್ರೇರಣೆಯಾಗಿವೆ. ದ್ವಾದಶ ಪಂಥಗಳ ಆಚರಣೆ, ಸಿದ್ಧಾಂತ, ಸಾಧನಾ ವಿಧಾನ ಮತ್ತು ಸಾಮಾಜಿಕ–ಸಾಂಸ್ಕೃತಿಕ ಪ್ರಭಾವಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ. ನಾಥ ಪಂಥದ ವೈವಿಧ್ಯತೆ ಹಾಗೂ ಭಾರತೀಯ ಧಾರ್ಮಿಕ ಚಿಂತನೆಗೆ ಅದರ ಕೊಡುಗೆಯನ್ನು ಚಾರಿತ್ರಿಕ ಮತ್ತು ತಾತ್ವಿಕ ನೆಲೆಯಲ್ಲಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.*

**Keywords:** *ನಾಥ ಪಂಥ, ದ್ವಾದಶ ಪಂಥಗಳು, ಬಾರಹ ಪಂಥಗಳು, ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಹಠಯೋಗ*

**ಪೀಠಿಕೆ**

ಆದಿನಾಥ ಅಂದರೆ ಶಿವ, ಶಿವನಿಂದ ನಿರ್ಮಾಣವಾದ ಪಂಥವೇ ನಾಥಪಂಥ ಎಂಬ ನಂಬಿಕೆಯು ಮೊದಲಿನಿಂದಲೂ ಈ ಪಂಥದಲ್ಲಿದೆ. ಶಿವನ ಶಿಷ್ಯನಾದ ಮತ್ಸ್ಯೇಂದ್ರನಾಥನೇ ಈ ಪಂಥದ ಪ್ರವರ್ತಕ ಎಂಬುದು ನಿರ್ವಿವಾದವಾದ ಸಂಗತಿಯಾಗಿದೆ. ಆದರೂ ಗೋರಕ್ಷನಾಥ ಈ ಪಂಥದ ಪ್ರವರ್ತಕ ಎಂಬ ಅಭಿಪ್ರಾಯಗಳು ಕಂಡು ಬರುತ್ತವೆ. "ಗೋರಕ್ಷನಾಥನೇ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಈ ಪಂಥದ ಸಂಘಟಕ"[1] ಎಂದು ಭಾವಿಸಲಾಗಿದೆ. ಈ ಎಲ್ಲಾ ಅಭಿಪ್ರಾಯದ ನಡುವೆಯೂ ಮತ್ಸ್ಯೇಂದ್ರನಾಥರು ಮತ್ತು ಗೋರಕ್ಷನಾಥರು, ಗುರು ಶಿಷ್ಯ ಪರಂಪರೆಯ ಆದಿಪುರುಷರು ಎಂಬುದರಲ್ಲಿ ಎರಡು ಮಾತಿಲ್ಲ. ಇಂತಹ ಗುರು ಶಿಷ್ಯ ಪರಂಪರೆಯ ಹಾದಿಯಲ್ಲಿ ದ್ವಾದಶ ಪಂಥಗಳನ್ನು ಕಾಣಬಹುದಾಗಿದೆ. ಈ ಪಂಥಗಳನ್ನು ನಾಥಪಂಥದಲ್ಲಿ ಬಾರಹ ಪಂಥಗಳು ಎಂದು ಕರೆಯುತ್ತಾರೆ. ಬಾರಹ ಪಂಥವೆಂದರೆ ಹನ್ನೆರಡು ಪಂಥಗಳು ಎಂದರ್ಥ.

ದ್ವಾದಶ ಪಂಥಗಳು ಯಾವ ಕಾಲಘಟ್ಟದಲ್ಲಿ? ಪ್ರಚಲಿತಕ್ಕೆ ಬಂದವು ಎಂಬುದಕ್ಕೆ ಖಚಿತವಾದ ಮಾಹಿತಿ ಇಲ್ಲ. ಇದರ ಜೊತೆಗೆ ಈ ಉಪ ಪಂಥಗಳ

[1] ಶ್ರೀಧರ್, ಹೆಚ್.ಜಿ. (2021). ನಾಥಪಂಥ. ಪುಟ, 39.

**Please cite this article as:** ಪಲ್ಲವಿ, ಎಸ್. ಎನ್ ಮತ್ತು ಶ್ವೇತಾರಾಣಿ, ಹೆಚ್. (2026). ನಾಥ ಪಂಥದ ದ್ವಾದಶ ಪಂಥಗಳು (ಬಾರಹ ಪಂಥಗಳು). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(4), 1–13

ಬಗ್ಗೆ ವಿವಿಧ ಗ್ರಂಥಗಳಲ್ಲಿ ವಿವಿಧ ಅಭಿಪ್ರಾಯಗಳನ್ನು ಗುರುತಿಸಬಹುದಾಗಿದೆ. ಬ್ರಿಗ್ಸ್ ತನ್ನ Goraknath and the Kanphata Yogis ಕೃತಿಯಲ್ಲಿ "*Traditionally there are twelve sub sects, each organized by a disciple of Gorakhnath*"[2] ಅಂದರೆ ಸಾಂಪ್ರದಾಯಿಕವಾಗಿ 12 ಪಂಥಗಳಿವೆ, ಅವುಗಳಲ್ಲಿ ಪ್ರತಿಯೊಂದನ್ನು ಗೋರಕ್ಷನಾಥರ ಒಬ್ಬ ಶಿಷ್ಯನು ಸಂಘಟಿಸಿದ್ದಾನೆ ಎಂಬುದಾಗಿ ಉಲ್ಲೇಖಿಸಿದ್ದಾರೆ. ಗೋರಕ್ಷನಾಥನ ಮರಣದ ತತ್‌ಕ್ಷಣದ ಅವಧಿಯಲ್ಲಿ ಕೆಲವು ಉಪಪಂಥಗಳು ಆರಂಭಗೊಂಡರೆ, ಮತ್ತೆ ಕೆಲವು ಆ ನಂತರದ ಸಂದರ್ಭದಲ್ಲಿ ಆರಂಭಗೊಂಡಿರಬೇಕು. ನಾಥಪಂಥದ ತಾತ್ವಿಕತೆಗೆ ಅನುಗುಣವಾಗಿ ಈ ಉಪಪಂಥಗಳು ಅದರೊಳಗೆ ವಿಲೀನವಾದಂತೆ ಕಾಣುತ್ತದೆ. ಈ ಉಪ ಪಂಥಗಳ ಬಗ್ಗೆ ಅರ್ಧದಷ್ಟು ಜನರು ಮಾತ್ರ ಮಾನ್ಯ ಮಾಡಿದ್ದಾರೆ. ಮತ್ತೆ ಕೆಲವು ಜನರು ಈ ಉಪ ಪಂಥಗಳ ಬಗೆಗೆ ನಿರಾಕರಣೆಯ ಭಾವವನ್ನು ತಳೆದಿದ್ದಾರೆ. "But this sub sect claims from Gorakhnath"[3] ಅಂದರೆ ಗೋರಕ್ಷನಾಥನಿಂದ ಬಂದವು ಎಂದು ಈ ಪಂಥಗಳು ಹೇಳಿಕೊಳ್ಳುತ್ತವೆ ಎಂದು ಬ್ರಿಗ್ಸ್ ಉಲ್ಲೇಖಿಸಿದ್ದಾರೆ. ಆದರೆ ಗೋರಕ್ಷನಾಥನು ಇಂತಹ ಪಂಥಗಳ ವಿಭಜನೆಯನ್ನು ಮಾಡಿರಲು ಸಾಧ್ಯವಿಲ್ಲ ಅವರ ಮರಣದ ನಂತರ ಅವರ ಶಿಷ್ಯರು ರೂಪಿಸಿಕೊಂಡಿರುವ ಪಂಥಗಳಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಬಾರಹ ಪಂಥ ಎಂಬ ಹೆಸರಿನಿಂದ ಗುರುತಿಸಿಕೊಳ್ಳುವ ಈ ಪಂಥಗಳ ಪಟ್ಟಿಯು 12 ಪಂಥಗಳಿಗಿಂತಲೂ ಹೆಚ್ಚಾಗಿವೆ. ಹೀಗೆ ಅಧಿಕವಾಗಿ ಸೇರಿರುವ ಉಪ ಪಂಥಗಳು ಪ್ರಮುಖವಾದ ಶಾಖೆಗಳಲ್ಲದಿರಬಹುದು. ಗುರುವಿನ ಹೆಸರನ್ನು ಪ್ರಮುಖವಾಗಿಸಿಕೊಂಡ ಶಿಷ್ಯರು ಆರಂಭಿಸಿದ ಪಂಥವಾಗಿರಬಹುದು. ಇದಲ್ಲದೆ ವ್ಯಾಪಕವಾದ ಗುಂಪಿಗೆ ಸೇರಿದವರು ಆರಂಭಿಸಿದ ಪಂಥಗಳಾಗಿರಬಹುದು. ಮುಂದೆ ನಾಥಪಂಥದ ಪ್ರಸಿದ್ಧತೆಯೊಂದಿಗೆ ಇಲ್ಲಿನ ಗುರು ಮತ್ತು ಶಿಷ್ಯರು ತಮ್ಮದೇ ಸಿದ್ಧಾಂತದೊಂದಿಗೆ ಉಪಪಂಥವನ್ನು ರಚಿಸಿಕೊಂಡಿರುವಂತೆ ಕಾಣುತ್ತದೆ. ಹೀಗೆ ಬಂದ ಪರಂಪರೆ ಉಪ ಪಂಥಗಳ ಪಟ್ಟಿಯನ್ನು ಆಗಾಗಲೇ ಪರಿಷ್ಕರಿಸುತ್ತ ಹೊಸ ಹೆಸರುಗಳನ್ನು ಸೇರಿಸುತ್ತ ಬಾರಹ ಪಂಥದ ಪಟ್ಟಿ ಬೆಳೆದಿರಬಹುದು.

ನಾಥಪಂಥದಲ್ಲಿ ನವನಾಥರು ಎಂದು ಗುರುತಿಸಿಕೊಂಡಿರುವ ಮತ್ಸ್ಯೇಂದ್ರನಾಥ ಇವನ ಶಿಷ್ಯ ಗೋರಕ್ಷನಾಥ, ಆದಿನಾಥನ ಶಿಷ್ಯ ಜಾಲಂದರನಾಥ, ಇವನ ಶಿಷ್ಯ ಕಾನಿಫ ಮತ್ತು ಭರ್ತೃಹರಿ ಈ ಗುರು ಶಿಷ್ಯ ಪರಂಪರೆಯನ್ನು ಅನುಸರಿಸಿದ ಮುಂದಿನ ಶಿಷ್ಯ ವರ್ಗವು ಉಪ ಪಂಥಗಳನ್ನು ರೂಪಿಸಿ ತಮ್ಮದೇ ಆದ ಅನುಯಾಯಿಗಳನ್ನು ಸ್ಥಾಪಿಸಿಕೊಂಡರು. ಪರಂಪರೆಯ ಮುಂದುವರಿಕೆಗೆ ತಮ್ಮ ಪೂರ್ವದ ಗುರು ಶ್ರೇಷ್ಠರನ್ನು ತಮ್ಮ ಪಂಥದ ಹೆಸರುಗಳೊಂದಿಗೆ ಸೇರಿಸಿಕೊಂಡರು. ಇವೆ ಮುಂದೆ ಉಪ ಪಂಥಗಳ ಉಗಮಕ್ಕೆ ಬುನಾದಿಯಾಯಿತು.

ನಾಥಪಂಥದ ಪರಂಪರೆಯಲ್ಲಿ ದ್ವಾದಶ ಪಂಥಗಳು ರೂಪುಗೊಂಡಿರುವುದಕ್ಕೆ ಒಂದು ದಂತ ಕಥೆ ಪ್ರಚಲಿತದಲ್ಲಿದೆ. *Before making a final analysis of the lists, it may be well to record a tradition, reminiscent of the earlier Saivite sects, which they relate at Tilla. There were formerly eighteen panths of Siva and twelve of Gorakhnath. These two groups fought each other; and, as a result, twelve of the former and six of the latter were destroyed. The remaining twelve panths of the two sects constitute the order of*

2 George Weston Briggs. (1938). Gorakhnath and the Kanphata Yogis, Pp. 62
3 ಅದೇ. ಪುಟ.62

*the Kanphatas, or Gorakhnathis"*[4].ಹಿಂದೆ ಶಿವನಿಂದ ರೂಪುಗೊಂಡ 18 ಪಂಥಗಳು ಹಾಗೂ ಗೋರಕ್ಷನಾಥನಿಂದ ರೂಪುಗೊಂಡ 12 ಪಂಥಗಳಿದ್ದವು. ಈ ಎರಡು ಗುಂಪುಗಳ ನಡುವೆ ಸೈದ್ಧಾಂತಿಕ ನಿಲುವಿನ ಬಗೆಗೆ ಭಿನ್ನಾಭಿಪ್ರಾಯಗಳು ಆಗಿಂದಾಗಲೇ ಮೂಡುತ್ತಿದ್ದವು. ಈ ಹಿನ್ನಲೆಯು ಪರಸ್ಪರ ಘರ್ಷಣೆಗೆ ಕಾರಣವಾಯಿತು. ಇವರ ಹೋರಾಟದಿಂದ ಶಿವನ ಗುಂಪಿನ ಹನ್ನೆರೆಡು ಪಂಥಗಳು ಮತ್ತು ಗೋರಕ್ಷನಾಥನ ಆರು ಪಂಥಗಳು ನಾಶವಾದವು. ಉಳಿದ ಶಿವನ ಆರು ಪಂಥಗಳು ಮತ್ತು ಗೋರಕ್ಷನಾಥನ ಆರು ಪಂಥಗಳು ಮುಂದೆ ಬಾರಹ ಪಂಥಗಳಾಗಿ ರೂಪಗೊಂಡವು ಎಂಬ ನಂಬಿಕೆ ಈ ಪರಂಪರೆಯಲ್ಲಿದೆ. ಗೋರಕ್ಷನಾಥನು ತನ್ನ ಆರು ಉಪ ಪಂಥಗಳು ಹಾಗೂ ಶಿವನ ಆರು ಉಪ ಪಂಥಗಳೊಂದಿಗೆ ಸಾಮರಸ್ಯವನ್ನು ಮೂಡಿಸಿ ದ್ವಾದಶ ಪಂಥಗಳನ್ನು ಆರಂಭಿದನು. ಇವೆ ಮುಂದೆ "ಗೋರಕ್ಷನಾಥನಿಂದ ಪ್ರವರ್ತಿತವಾದ ಬಾರಹ ಪಂಥೀ ಮಾರ್ಗಗಳು ಅಥವಾ ದ್ವಾದಶ ಪಂಥಗಳು ನಾಥ ಸಂಪ್ರದಾಯವಾಗಿ ಪ್ರಸಿದ್ಧವಾದವು".[5]

ನಾಥಪಂಥದಲ್ಲಿ ದ್ವಾದಶ ಪಂಥಗಳಲ್ಲದೆ 'ವಾಮಾಂಗ' ಎಂಬ ಹೆಸರಿನ ಪಂಥಗಳನ್ನು ಕಾಣಬಹುದಾಗಿದೆ. ಈ ಪಂಥವನ್ನು 'ಅರ್ಧ ಪಂಥಗಳು' ಎಂಬ ಹೆಸರಿನಿಂದಲೂ ಗುರುತಿಸಲಾಗುತ್ತದೆ. ಈ ಅರ್ಧ ಪಂಥಗಳು ಪುರಾತನ ಶೈವ ಪರಂಪರೆಯ ಪಂಥಗಳನ್ನು ನೆನಪಿಗೆ ತರುತ್ತವೆ. ಬ್ರಿಗ್ಸ್ ಉಲ್ಲೇಖಿಸಿರುವ ಅರ್ಧ ಪಂಥಗಳನ್ನು ಮುಂದಿನಂತೆ ಹೆಸರಿಸಬಹುದು. ಶಿವನಿಂದ ಸ್ಥಾಪನೆಗೊಂಡ ಶಾಖೆಗಳು 1) Kantharnath of Bhuj, in Kacch (ಕಚ್ಛ್ ನ ಭುಜ್ನ ಕಂಥರನಾಥಿ) 2) Pagalnath of Peshawar and Rohtak (ಪೇಶಾವರ ರೋಹತಕ್‌ನ ಪಾಗಲನಾಥ) 3) Rawal of Afghanistan (ಅಫಘಾನಿಸ್ತಾನದ ರಾವಲ್ ಪಂಥ) 4) Pahkh (ಪಂಖ ಇಲ್ಲವೇ ಪಂಕ) 5) Ban of Marwar (ಮಾರವಾಡದ ಬನ್) 6) Gopal, or Ram ke. (ಗೋಪಾಲ ಅಥವಾ ರಾಮ್ ಪಂಥ). ಗೋರಕ್ಷನಾಥ ಸ್ಥಾಪನೆಕೊಂಡ ಶಾಖೆಗಳು 1) Hethnath (ಹೇಥನಾಥ್) 2) Colinath of the Ai-panth of Devi Simla (Bombay), (ಬಿಮ್ಲದೇವಿಯ ಆಯಿಪಂಥದ ಅನುಯಾಯಿಗಳ ಕೋಲಿನಾಥ) 3) Candnath, Kaplani (ಚಾಂದನಾಥ, ಕಪಲಾನಿ) 4) Biirag, Ratadhonda Marwar, Ratan-nath (ಮಾರವಾಡದ ಭೈರಾಗ್‌ನ, ರತನ್‌ನಾಥ) 5) Paonath, of Jaipur (ಜೈಪುರದ ಪಾಯೊನಾಥ) 6) Dhajjanath (Mahabir) (ಮಹಾಬಿರ್‌ನ ಧಜ್ಜನಾಥ)[6] . ಹೀಗೆ ಶಿವ ಹಾಗೂ ಗೋರಕ್ಷನಾಥರಿಂದ ಪ್ರವರ್ತಿತವಾದ ಸಂಘರ್ಷದ ನಂತರ ಉಳಿದ ಈ ಹನ್ನೆರೆಡು ಪಂಥಗಳು ದ್ವಾದಶ ಪಂಥಗಳಾದವು. ಬಹುಶಃ ಗೋರಕ್ಷನಾಥನ ಪ್ರಭಾವದಿಂದ ಶೈವ ಪಂಥಗಳಲ್ಲಿ ನವೀನ ಮರುಸಂಘಟನೆಯನ್ನು ಈ ದಂತಕಥೆ ಸೂಚಿಸುತ್ತದೆ. ಈ ಮರುಸಂಘಟನೆಯ ಸಂದರ್ಭದಲ್ಲಿ ಅನೇಕ ಹಳೆಯ ಶೈವ ಪಂಥಗಳು ಕಣ್ಮರೆಯಾದವು.

ನಾಥ ಪಂಥದಲ್ಲಿರುವ ದ್ವಾದಶ ಪಂಥಗಳ ಬಗ್ಗೆ ಬಹುತೇಕ ಗ್ರಂಥಗಳಲ್ಲಿ ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬೇರೆ ಬೇರೆ ಕೃತಿಗಳಲ್ಲಿ ದ್ವಾದಶ ಪಂಥಗಳ ಹೆಸರು ಮತ್ತು ಸಂಖ್ಯೆಯಲ್ಲಿ ವ್ಯತ್ಯಾಸವನ್ನು ಗಮನಿಸಬಹುದು. ಹೆಸರೇ ಹೇಳುವಂತೆ 12 ಪಂಥಗಳಾಗಿರಬೇಕಾದ ಈ ಉಪ ಶಾಖೆಗಳು ಕೆಲವೊಂದು ಗ್ರಂಥಗಳಲ್ಲಿ 12

---

[4] George Weston Briggs. (1938). Gorakhnath and the Kanphata Yogis, Pp. 63

[5] ಕೃಷ್ಣಮೂರ್ತಿ, ಮ.ಸು. (2010). ಸಿದ್ಧ ಸಾಹಿತ್ಯ. ಪುಟ.155.

[6] George Weston Briggs. (1938). Gorakhnath and the Kanphata Yogis, Pp. 63

ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಉಲ್ಲೇಖವಾಗಿವೆ. ಹೀಗೆ ವಿವಿಧ ಕೃತಿಗಳಲ್ಲಿ ಉಲ್ಲೇಖವಾಗಿರುವ ದ್ವಾದಶ ಪಂಥಗಳ ವಿವರ ಕೆಳಗಿನಂತಿವೆ.

ಮರಾಠಿ ಮೂಲದ ರಾಮಚಂದ್ರ ಚಿಂತಾಮಣ ಢೇರೆಯವರು ತಮ್ಮ 'ನಾಥ ಸಂಪ್ರದಾಯದ ಇತಿಹಾಸ' ಎಂಬ ಕೃತಿಯಲ್ಲಿ "ನಾಥಪಂಥದ ಈ ಶಾಖಾ ಭೇದದ ಕುರಿತು ವಿಶೇಷ ಚರ್ಚೆ ನಡೆದದ್ದು ಎಲ್ಲಿಯೂ ಗೋಚರಿಸುವದಿಲ್ಲ"[7] ಎಂದು ಹೇಳಿರುವುದು ಗಮನಾರ್ಹ ಸಂಗತಿಯಾಗಿದೆ. "ಮಹಾನುಭಾವರ ಆದ್ಯ ಗ್ರಂಥವಾದ ಲೀಳಾ ಚರಿತ್ರೆಯಲ್ಲಿ 'ಚೋಳಿಕ' ಎಂಬ ನಾಥಪಂಥದ ಶಾಖೆಯೊಂದರ ಉಲ್ಲೇಖವಿದೆ."[8] ಹಾಗೆಯೇ "ಸ್ಮೃತಿ ಸ್ಥಳಾ ಎಂಬ ಕೃತಿಯಲ್ಲಿ 'ಕಾಮಳೆ' ಮಾರ್ಗದ ಉಲ್ಲೇಖವಿದೆ".[9] ಬೌದ್ಧ ಧರ್ಮದಿಂದ ಕವಲೊಡೆದ ಮಹಾನುಭಾವರ 'ಷಟ್ದರ್ಶನವಿವರ್ಣನ' ಕೃತಿಯ ಉತ್ತರಕಾಲೀನ ಪ್ರಕರಣದಲ್ಲಿ ನಾಥಪಂಥದ ಶಾಖೆಗಳ ಅಥವಾ ನಾಥಪಂಥದ ದ್ವಾದಶ ಪಂಥಗಳ ಮಾಹಿತಿಯಿದೆ.

*ನಾಟೇಶ್ವರೀ ಲಕ್ಷಣ ಪಂಥಿ । ಆಣೀ ಪಾರ್ವತಿನಾಥೀ ।*

*ಅಭಂಗನಾಥೀ । ಕಾಪಿಲ ವಿಭೂತಿಯೇ ॥*

*ಭರತರೀ ವೈರಾಗ್ಯ ಕೇವಲ । ಪಂಖ ಆಯೀ ಪಂಥೀ ರಾವುಳ ।*

*ವಾನ ಪಂಥಿ ಪಾಂಗುಳ । ದಾಸಮಾರ್ಗಿ ॥*

*ಹೇ ನಾಟೇಶ್ವರಾಧಿಕ । ಬಾರಾಪಂಥೀ ಯೋಗಿ ದೇಖ ।*

*ಆಣಿಕ ಸಂತನಾಥಾದಿ ಐಕ । ಆಠರಾಪಂಥೀ ॥*

*ಸಂತನಾಥಪಂಥೀ । ಸಾಂತಿನಾಥೀ ಗುಲಲಯ(?) ಧರನಾಥೀ ।*

*ಹಾಯಸೇಖೀನ ಕಾ ಉಖಾಳ ಪಂಥೀ । ನಾಥ ಲಕ್ಷಣ ॥*

*ರಾಮನಾಥೀ ವಂಕನಾಥೀ । ಯೋಗಿ ವೈರಾಗೀ ಗಮಪಂಥೀ ।*

*ಚೋಳೀಕ ಗಂಗನಾಥೀ ಗೋಪಾಳ ಪಂಥೀ । ಹೇ ಮಾರ್ಗಿ ಧನಂಜಯ ॥*

*ಗಜಕಂಥಡೀ ನಾಗಾರ್ಜುನ ಪಂಥೀ । ಹೇ ಆಠರಾ ಪಂಥ ಬೋಲಿಜತೀ ।*

*ಐಸೇ ತೀಸ ಪಂಥಿ ಭೇದ ಆಸತೀ । ಯೋಗಿಯಾಂಚೇ ॥* [10]

ಈ ಕೃತಿಯಲ್ಲಿ ಉಲ್ಲೇಖವಾಗಿರುವ ಪಂಥಗಳು ಇಂತಿವೆ; ನಾಟೇಶ್ವರಿ, ಲಕ್ಷ್ಮಣ ಪಂಥಿ, ಪಾರ್ವತಿನಾಥೀ, ಅಭಂಗನಾಥೀ, ಕಾಪಿಲ ಪಂಥ, ವಿಭೂತಿ ಪಂಥ, ಭರತರೀ ವೈರಾಗ್ಯ ಪಂಥ, ಆಯೀ ಪಂಥ, ರಾವುಳ ಪಂಥ, ವಾನ ಪಂಥ, ಪಾಂಗುಳ ಪಂಥ, ದಾಸ ಪಂಥ ಈ ಹನ್ನೆರಡು ಪಂಥಗಳನ್ನು ಹೆಸರಿಸಲಾಗಿದೆ. ಇದಲ್ಲದೆ ಸಂತನಾಥ, ಸಾಂತಿನಾಥೀ, ಧರನಾಥೀ, ಹಾಯಸೇಖೀನ, ಉಖಾಳ ಪಂಥೀ, ರಾಮನಾಥೀ, ವಂಕನಾಥೀ, ಯೋಗಿ, ವೈರಾಗೀ, ಗಮಪಂಥೀ, ಚೋಳೀಕ, ಗಂಗನಾಥೀ, ಗೋಪಾಳ ಪಂಥೀ, ಹೇಮಾರ್ಗಿ, ಧನಂಜಯ, ಗಜಕಂಥಡೀ, ನಾಗಾರ್ಜುನ ಪಂಥೀ ಇವು ಸಂತರ ಹದಿನೆಂಟು ಪಂಥಗಳ ಉಲ್ಲೇಖವಿದೆ. ನಾಥಪಂಥದಲ್ಲಿ ಕೆಲವು ಪಂಥ ಭೇದಗಳು ಸೇರಿ ಒಟ್ಟು ಮೂವತ್ತು ಪಂಥಗಳ ವಿಭಾಗಗಳು ಯೋಗಿಗಳಲ್ಲಿವೆ ಎಂದು ಉಲ್ಲೇಖಸಲಾಗಿದೆ.

ಮಹಾನುಭಾವರ ಕೃತಿಯಾದ 'ದರ್ಶನ ಪ್ರಕಾಶ'ದಲ್ಲಿ ದ್ವಾದಶ (ಹನ್ನೆರಡು) ಪಂಥದ ಬಗೆಗೆ ಉಲ್ಲೇಖಸಲಾಗಿದೆ.

*ನಾಟೇಶ್ವರ ಭೈರವ ಸಂತನಾಥ । ಜಾಲಂಧರೀ ವಾಘಳೀ ಅವಘಟೀ ಅಘಡ ಕಳಂಕ ಪಂಥ ।*

*ಅಘೋರ ಮಚ್ಚ ಅಳಪಾಳೀ ಮಹಿಂದ್ರನಾಥ । ಘೋಡಾಚುಡೀ ॥*

---

[7] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 52

[8] ಅದೇ. ಪುಟ. 52

[9] ಅದೇ. ಪುಟ. 52

[10] ಅದೇ. ಪುಟ.52–53

*ಸುವರ್ಣ ಪಂಥ ಬಾಳನಾಥ । ಹಾ ಯೋಗ ಜಾಣಿಜೇ ಬಾರಾ ಪಂಥ ॥* [11]

ಈ ಕೃತಿಯಲ್ಲಿ ನಿರ್ದೇಶಿರುವ ದ್ವಾದಶ ಪಂಥಗಳೆಂದರೆ ನಾಟೇಶ್ವರ, ಭೈರವ, ಸಂತನಾಥ, ಜಾಲಂಧರೀ, ವಾಫಳೀ, ಅವಘಟೀ, ಅಘಡ, ಕಳಂಕ ಪಂಥ, ಅಘೋರ, ಮಚ್ಚ, ಅಳಪಾಳೀ, ಮಹಿಂದ್ರನಾಥ. ನಾಥಪಂಥದಲ್ಲಿ ಪ್ರಚಲಿತದಲ್ಲಿರುವ ಶಾಖೆಗಳಿಗಿಂತ ಬೇರೆ ಹೆಸರುಗಳು ಇಲ್ಲಿ ಉಲ್ಲೇಖಗೊಂಡಿರುವುದನ್ನು ಗಮನಿಸಬಹುದು. ಆದರೆ ಢೇರೆಯವರು ಇಲ್ಲಿಯೂ ಹಲವು ಹೆಸರುಗಳ ಬಗೆಗೆ ಅರ್ಥವು ತಿಳಿಯುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾಥಪಂಥದಿಂದ ಮಾನ್ಯತೆ ಪಡೆದ ಪಂಥಗಳಿಗಿಂತ ಬಿನ್ನವಾದ ಹೆಸರುಗಳು ಉಲ್ಲೇಖಗೊಂಡಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಪ್ರಾದೇಶಿಕ ಭಿನ್ನತೆ ಹಾಗೂ ಅನುಯಾಯಿಗಳು ತಮ್ಮ ಗುರುಗಳ ಹೆಸರಿನಲ್ಲಿ ರೂಪಿಸಿಕೊಂಡ ಉಪಪಂಥಗಳು ಕಾಲಾಂತರದಲ್ಲಿ ನಾಥಪಂಥದ ದ್ವಾದಶ ಪಂಥಗಳೊಂದಿಗೆ ಸೇರಿರುವುದು ನಾಮ ವಿಶೇಷಕ್ಕೆ ಕಾರಣವಾಗಿರಬಹುದು. ಈ ನಡುವೆಯೂ ನಾಥಪಂಥ ದ್ವಾದಶ ಪಂಥಗಳು ಎಂದು ಪರಿಗಣಿಸಲಾಗುವ ಶಾಖೆಗಳ ವಿವರ ಮುಂದಿನಂತಿದೆ. ಈ ಹದಿಮೂರು ಶಾಖೆಗಳ ಪರಿಚಯ ಮಾಡಿಕೊಳ್ಳೋಣ.

ಬ್ರಿಗ್ಸ್ ಕೃತಿಯಲ್ಲಿ ಉಲ್ಲೇಖವಾಗಿರುವಂತಹ ದ್ವಾದಶ ಪಂಥಗಳು ಇಂತಿವೆ 1. Satnath (ಸತ್ಯನಾಥಿ), 2. Ramnath (ರಾಮನಾಥಿ), 3. Dharamnath (ಧರ್ಮನಾಥಿ), 4. Laksmannath (ಲಕ್ಷ್ಮಣನಾಥಿ), 5. Daryanth (ದರಿಯಾನಾಥಿ), 6. Ganganath (ಗಂಗಾನಾಥಿ), 7. Bairag (Bhartrhari, Bairag Catri), (ಬೈರಾಗ ಪಂಥಿ) 8. Rawal or Nagnath, (ರಾವಲ, ನಾಗನಾಥಿ) 9. Jalandharipa (ಜಾಲಂಧರಿಪಾ) 10. Aipanth (ಆಯಿಪಂಥಿ) 11. Kaphani (ಕಪಲಾನಿ), 12. Dhajjanath (ಧ್ವಜನಾಥಿ) 13. Kanipa (ಕಾನಿಪಾ)

1. Satnath **(ಸತ್ಯನಾಥಿ):** ಈ ಶಾಖೆಯ ಮೂಲ ಪ್ರವರ್ತಕ ಸತ್ಯನಾಥ. ಸತ್ಯನಾಥ ಎಂಬುದು ಬ್ರಹ್ಮನ ಮತ್ತೊಂದು ಹೆಸರು. ಈ ಪಂಥದವರು ಬ್ರಹ್ಮನನ್ನು ಆರಾಧಿಸುವರು. ಆದ್ದರಿಂದ ಈ ಯೋಗಿಗಳು ತಮ್ಮನ್ನು ಬ್ರಹ್ಮ ಯೋಗಗಳು ಎಂಬುದಾಗಿ ಸಂಭೋದಿಸುತ್ತಾರೆ. ಈ ಶಾಖೆಯು ಒರಿಸ್ಸಾದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಪಾತಾಳ ಭುವನೇಶ್ವರಿ ಈ ಪಂಥದವರಿಗೆ ಪವಿತ್ರ ಸ್ಥಳವಾಗಿದೆ. ನಾಥಪಂಥದ ಶಾಖೆಗಳ ಪಟ್ಟಿಯಲ್ಲಿಯೂ ಈ ವಿಭಾಗದ ಹೆಸರು ಉಲ್ಲೇಖವಾಗಿರುವುದು ಗಮನಾರ್ಹವಾಗಿದೆ. ಈ ಪಂಥವು ಶಿವನಿಂದ ರೂಪಿತವಾದ ಪಂಖ ಶಾಖೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಒರಿಸ್ಸಾದ ಪುರಿ ಮತ್ತು ಇತರ ಸ್ಥಳಗಳಲ್ಲಿ ಈ ಶಾಖೆಯ ಪ್ರಮುಖ ಗುರು ಪೀಠಗಳಿವೆ. ಹರಿಯಾಣ ರಾಜ್ಯಕ್ಕೆ ಸೇರಿರುವ ಥಾನೇಶರ್, ಕರ್ಣಾಲ, ಭೇವಾ ಸ್ಥಳಗಳಲ್ಲಿ ಈ ಶಾಖೆಯ ಮಠಗಳಿವೆ. ವಿಶೇಷವಾಗಿ ಈ ಪಂಥದವರು ಟೋಪಿ ಮತ್ತು ಕೋಟ್‌ಗಳನ್ನು ಧರಿಸುತ್ತಾರೆ. ಈ ವಿಶೇಷತೆ ನಾಥ ಯೋಗಿಗಳಲ್ಲಿ ಇವರನ್ನು ಗುರುತಿಸಲು ಸಹಾಯವಾಗುತ್ತದೆ. “ಧರ್ಮನಾಥಿ ಉಪ ಪಂಥವು ಈ ಪಂಥದಿಂದ ಉದಯಿಸಿತು ಎಂದು ಹೇಳಲಾಗುತ್ತದೆ”.[12] ಧರ್ಮನಾಥರೊಂದಿಗೆ ಕಚ್ ಪ್ರದೇಶಕ್ಕೆ ತೆರಳಿದ ಗರೀಬನಾಥ ಎಂಬ ಯೋಗಿಯು ಈ ಪಂಥಕ್ಕೆ ಸೇರಿದವನು ಎನ್ನಲಾಗುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಕರ್ನಾಟಕದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಟ್ಲದಲ್ಲಿರುವ ಶ್ರೀ ಯೋಗೀಶ್ವರ ಗೋರಖನಾಥ

[11] ಅದೇ. ಪುಟ, 53

[12] George Weston Briggs. (1938). Gorakhnath and the Kanphata Yogis, Pp. 64

ಮಠಕ್ಕೆ ಸತ್ಯನಾಥಿ ಪಂಥದ ಯೋಗಿಯನ್ನು ಪೀಠಾಧಿಪತಿಯಾಗಿ ನೇಮಿಸುವ ಸಂಪ್ರದಾಯವಿದೆ.

2. Ramnath (Ram ke) **(ರಾಮನಾಥಿ)** : ರಾಮನಾಥಿ ಶಾಖೆಯ ಮೂಲ ಪ್ರವರ್ತಕ ಶ್ರೀರಾಮಚಂದ್ರ ಎಂಬುದಾಗಿ ಹೇಳಲಾಗಿದೆ. ಆದರೆ ಶಿವನಿಂದ ರೂಪಿತವಾದ ಈ ಶಾಖೆಯು ತಪ್ಪಾಗಿ ಶ್ರೀರಾಮಚಂದ್ರನ ಮೂಲವನ್ನು ಹೇಳಲಾಗಿದೆ. ಗೋರಖಪುರದಲ್ಲಿ ಈ ಶಾಖೆಯು ಪ್ರವರ್ಧಮಾನಕ್ಕೆ ಬಂದಿತು. ಚೌಕತಪ್ಪೆ ಪಂಚೌರಾ ಎಂಬ ಸ್ಥಳವು ಈ ಶಾಖೆಯವರಿಗೆ ಪವಿತ್ರವಾದ ತಾಣವಾಗಿದೆ. ಶಿವನಿಂದ ರೂಪಿತವಾದ ಗೋಪಾಲ್ ಎಂಬ ಪಂಥದೊಂದಿಗೆ ಈ ಪಂಥವು ಸಂಬಂಧವನ್ನು ಹೊಂದಿದೆ. ಈ ಪಂಥದ ಮೂಲವನ್ನು ಸಂತೋಕ್‌ನಾಥ ಯೋಗಿಗಳಲ್ಲಿ ಕಂಡುಕೊಂಡಿದ್ದಾರೆ. **"**ಆದರೆ ಸಂತೋಕ್‌ನಾಥನು ಸ್ವತಃ ಯಾವುದೇ ಪಂಥವನ್ನು ಸ್ಥಾಪಿಸಿಲ್ಲ**"**.[13] ಈ ಶಾಖೆಯ ಸಂಬಂಧ ಹೊಂದಿರುವ ಗೋಪಾಲ್ ನಾಥಿಗಳು ಜೋಧ್‌ಪುರದಲ್ಲಿ ಕಂಡುಬರುತ್ತಾರೆ. ಈ ಶಾಖೆಯ ಮುಖ್ಯ ಪೀಠವು ದೆಹಲಿಯಲ್ಲಿದೆ.

3. Dharamnath**(ಧರ್ಮನಾಥಿ):** ನಾಥಪಂಥದ ನವನಾಥರಲ್ಲಿ ಧರ್ಮನಾಥರು ಕೂಡ ಒಬ್ಬರು ಎಂದು ಪರಿಗಣಿಸಲಾಗಿದೆ. ಈ ಧರ್ಮನಾಥನನ್ನು ಈ ಪಂಥದ ಮೂಲ ಪ್ರವರ್ತಕನೆಂದು ಗುರುತಿಸಲಾಗುತ್ತದೆ. ಧರ್ಮನಾಥ ಪಂಥದ ಮೂಲವನ್ನು ಧರ್ಮರಾಜ ಅಥವಾ ಯುಧಿಷ್ಠಿರ ಮಹಾರಾಜನಲ್ಲಿ ಗುರುತಿಸಲಾಗಿದೆ. ಈ ಪಂಥದ ಉಗಮಸ್ಥಾನ ನೇಪಾಳ. **"**ಧರ್ಮನಾಥಿಗಳ ಪ್ರಮುಖ ಪವಿತ್ರ ಸ್ಥಳ ದುಲ್ಲುದೆಲಕವಾಗಿದೆ**"**.[14] ರಾಜ ಧರ್ಮನು ಸತ್ಯನಾಥ ಪರಂಪರೆಯ ಯೋಗಿಯಾಗಿದ್ದನು. ಈತನನ್ನು ಮತ್ಸ್ಯೇಂದ್ರನಾಥನ ಶಿಷ್ಯ ಎಂದು ಹೇಳಲಾಗುತ್ತದೆ. ಈ ಶಾಖೆಯ ಮುಖ್ಯ ಕೇಂದ್ರವನ್ನು ಗೋದಾವರಿ ತೀರ ಪ್ರದೇಶಗಳಲ್ಲಿ ಕಾಣಬಹುದು. ಕಚ್‌ನ ಧಿನೋಧರ್ ಈ ಪಂಥದವರ ಪವಿತ್ರ ಹಾಗೂ ಪ್ರಮುಖ ಮಠವಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಯಡಮೊಗೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಸಿದ್ಧಪೀಠ ಕೊಡಚಾದ್ರಿ ಹಲವರಿ ಮಠವಿದೆ. ಈ ಮಠದ ಮಠಾಧಿಪತಿಯು ಧರ್ಮನಾಥಿ ಪಂಥಕ್ಕೆ ಸೇರಿದ್ದಾರೆ.

4. Laksmannath **(ಲಕ್ಷ್ಮಣನಾಥಿ):** ಲಕ್ಷ್ಮಣನಾಥಿ ಶಾಖೆಯ ಮೂಲ ಪ್ರವರ್ತಕ ಲಕ್ಷ್ಮಣನಾಥ್. ಇವರು ಗೋರಕ್ಷನಾಥನ ಶಿಷ್ಯರಾಗಿದ್ದರು. ಈ ಯೋಗಿಯು ಗೋರಕ್ಷನಾಥರ ನಂತರ ಪಂಜಾಬಿನ ಟಿಲ್ಲಾ ಎಂಬ ನಾಥಮಠದಲ್ಲಿ ಮಹಂತ ಅಥವಾ ಪೀಠಾಧಿಪತಿಯಾದನು. ಈ ಶಾಖೆಯು ಪಂಜಾಬಿನ ಝೆಲಮ್ ಪ್ರದೇಶದಲ್ಲಿ ರೂಪುಗೊಂಡಿತು. ಲಕ್ಷ್ಮಣನಾಥಿಗಳ ಮೋವಖಠಿಲಾ ಪವಿತ್ರ ಸ್ಥಳವಾಗಿದೆ. ಕಾಲಾಂತರದಲ್ಲಿ ಈ ಪಂಥವು ಎರಡು ವಿಭಾಗಗಳಾಗಿ ಕವಲೊಡೆಯಿತು. ಆ ವಿಭಾಗಗಳೆಂದರೆ ನಾಟೇಶ್ವರಿ ಹಾಗೂ ದರಿಯಾ. ಈ ವಿಭಾಗಗಳಲ್ಲಿರುವ ವ್ಯತ್ಯಾಸವೆಂದರೆ ನಾಟೇಶ್ವರಿ ಪಂಥದವರು ಟಿಲ್ಲಾ ಬೆಟ್ಟದ ಮೇಲೆ ವಾಸಿಸಿದರೆ, ದರಿಯಾ ಪಂಥದವರು ಸಮತಟ್ಟಾದ ಪ್ರದೇಶಗಳಲ್ಲಿ ವಾಸಿಸುತ್ತಾರೆ. ದರಿಯಾ ಪಂಥವನ್ನು ಟಿಲ್ಲಾ ಪ್ರದೇಶದಲ್ಲಿ ಹುಟ್ಟಿಕೊಂಡ ಪಂಥ ಎಂಬುದಾಗಿ ಹೇಳಲಾಗುತ್ತದೆ. ಹಾಗೆಯೇ ನಾಟೇಶ್ವರಿ ಪಂಥವು ಅಮೃತಸರವನ್ನು ಪ್ರಮುಖ ಕೇಂದ್ರವಾಗಿಸಿಕೊಂಡಿತು. ಪ್ರದೇಶವನ್ನು ಹೋಷಿಯಾರ್ ಪುರದ ದರಬಾರಿ ಟಿಲ್ಲಾ ಬಾಲ್ ಗೊಂಡಲ್ ಎಂಬುದಾಗಿ ಕರೆದುಕೊಂಡಿದ್ದಾರೆ. ಇದು ಗೋರಕ್ಷನಾಥನ ಶಿಷ್ಯ ಹೇಥನಾಥರ ಪಂಥ ಎಂಬುದಾಗಿ ಪರಿಗಣಿಸಲಾಗುತ್ತದೆ. ಹೇಥನಾಥ ಪಂಥಕ್ಕೆ ಅಂಬಾಲಾ, ಜೆಹ್ಲಂ ಜಿಲ್ಲೆಯ ಹೇಥ್, ಇದಲ್ಲದೆ ಕರ್ಣಾಲ್‌ನ ಬಾಲ್ಜಾತಿ ಜನಾಂಗದವರು

---

[13] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 58

[14] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 58

ಅನುಯಾಯಿಗಳಾಗಿದ್ದಾರೆ. ಉಳಿದ ನಾಟೇಶ್ವರಿ ಪಂಥಕ್ಕೆ ರಾಂಝೂ ಜನಾಂಗದವರು ಅನುಯಾಯಿಗಳಾಗಿದ್ದಾರೆ.

5. Daryanth **(ದರಿಯಾನಾಥಿ):** ದರಿಯಾನಾಥಿಗಳು ಲಕ್ಷ್ಮಣನಾಥಿಯರ ಒಂದು ಉಪಶಾಖೆಯಾಗಿದೆ. ಇದು ಗೋರಕ್ಷನಾಥನ ಅನುಯಾಯಿಗಳಾದ ಹೇಥನಾಥನಿಂದ ರೂಪುಗೊಂಡಿತು ಎನ್ನಲಾಗಿದೆ. ಉತ್ತರ ಭಾರತದ ಬಹುಭಾಗಗಳಲ್ಲಿ, ವಿಶೇಷವಾಗಿ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯದ ಪಶ್ಚಿಮ ಭಾಗಗಳಲ್ಲಿ ಈ ಪಂಥದ ಅನುಯಾಯಿಗಳು ಕಂಡುಬರುತ್ತಾರೆ. ಇದಲ್ಲದೆ **"**ಮಕಟ್ (Makhad) ಕೊಹಾಟ್ (Kohat) ಮತ್ತು ಕ್ವೆಟ್ಟಾ (Quetta) ಪ್ರದೇಶಗಳಲ್ಲಿ ಈ ಪಂಥದ ಅನುಯಾಯಿಗಳಿದ್ದಾರೆ**"**.[15] ಸಿಂಧ್ ಪ್ರಾಂತ್ಯದ ಉದೆ ರೊಲಾಲ್ ಈ ಪಂಥದವರ ಪ್ರಮುಖ ಪುಣ್ಯಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಪ್ರತಿವರ್ಷ ಧಾರ್ಮಿಕ ಜಾತ್ರೆಗಳು ಜರುಗುತ್ತವೆ. ಈ ಧಾರ್ಮಿಕ ಉತ್ಸವದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಮತ ಭೇದವಿಲ್ಲದೆ ಪಾಲ್ಗೊಳ್ಳುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಕದ್ರಿ ಶ್ರೀ ಯೋಗೀಶ್ವರ ಮಠಕ್ಕೆ ಮಠಾಧಿಪತಿಯಾಗಿ ಆಯ್ಕೆ ಮಾಡುವಂತಹ ಸಂಪ್ರದಾಯವಿದೆ.

6. Ganganath **(ಗಂಗಾನಾಥಿ)**: **"**ಗಂಗಾನಾಥಿ ಪಂಥದ ಮೂಲಪುರುಷ ಭೀಷ್ಮ ಪಿತಾಮಹ ಎಂದು ಗುರುತಿಸಲಾಗಿದೆ**"**.[16] ಈ ಪಂಥವು ಪಂಜಾಬಿನ ಗುರುದಾಸಪುರದಲ್ಲಿ ಉದಯಿಸಿತು ಎನ್ನಲಾಗಿದೆ. ಇವರ ಪವಿತ್ರ ಸ್ಥಳ ಜಖವಾರದಲ್ಲಿದೆ. ಕಪಿಲಮುನಿ ಶಿಷ್ಯ ಗಂಗನಾಥರು ಈ ಪಂಥವನ್ನು ಆರಂಭಿಸಿದರು ಎಂದು ಹೇಳಲಾಗುತ್ತದೆ. ಗಂಗಾನಾಥಿಗಳೊಂದಿಗೆ ನಾಥಪಂಥದ ಉಪ ಶಾಖೆಗಳಾದ ಕಾಯನಾಥಿ ಮತ್ತು ರತನನಾಥಿಗಳು ಸಂಬಂಧವನ್ನು ಹೊಂದಿದ್ದಾರೆ ಎಂಬುದನ್ನು ಗುರುತಿಸಲಾಗಿದೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ, ಕದ್ರಿ ಶ್ರೀ ಯೋಗೀಶ್ವರ ಮಠಕ್ಕೆ ಗಂಗಾನಾಥಿ ಪಂಥದ ಯೋಗಿಯನ್ನು ಪೀಠಾಧಿಪತಿಯಾಗಿ ನೇಮಿಸುವ ಸಂಪ್ರದಾಯವು ಇಂದಿಗೂ ನಡೆಯುತ್ತಿರುವುದು ಗಮನಾರ್ಹವಾದಂತಹ ಸಂಗತಿಯಾಗಿದೆ.

7. Bairag -Bhartrhari, Bairag Catri **(ಬೈರಾಗ್ (ಭರ್ತೃಹರಿ):** ಬೈರಾಗ್ ಪಂಥದ ಮೂಲಪುರುಷ ಭರ್ತೃಹರಿ. ನಾಥ ಸಂಪ್ರದಾಯದಲ್ಲಿ ಭರ್ತೃಹರಿಯನ್ನು ನವನಾಥರಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ. ಈ ಪಂಥವು ಪೇಷ್ಕರ ಸಮೀಪದ ಅಜಮೇರ ಎಂಬ ಸ್ಥಳದಲ್ಲಿ ರೂಪುಗೊಂಡಿತು. ರತಢೊಂಢಾ ಈ ಪಂಥದವರ ಪವಿತ್ರ ಸ್ಥಳವಾಗಿದೆ. ಗೋರಕ್ಷನಾಥನ ಶಿಷ್ಯನಾದ ಭರ್ತೃಹರಿಯು ಉಜ್ಜಯಿನಿಯ ರಾಜನಾಗಿದ್ದನು. ರಾಜ್ಯ ತ್ಯಾಗ ಮಾಡಿ ಗುರು ಜಾಲಂಧರನಿಂದ ನಾಥ ದೀಕ್ಷೆ ಸ್ವೀಕರಿಸಿದನು. ನಂತರ ತನ್ನದೇ ಆದ ಶಾಖೆಯನ್ನು ರೂಪಿಸಿದನು. **"**ಹರಿದ್ವಾರದ ಆಯಿ ಪಂಥವು ಗೋರಕ್ಷನಾಥನೇ ಈತನಿಗೆ ದೀಕ್ಷೆ ನೀಡಿದವರು ಎಂದು ತಿಳಿಸುತ್ತದೆ**"**[17] . ಈ ಪಂಥವನ್ನು ಗೋರಕ್ಷನಾಥನು ರೂಪಿಸಿದ ನಾಲ್ಕನೆಯ ಮೂಲ ಪಂಥವೆಂದು ಗುರುತಿಸಲಾಗಿದೆ. ಭರ್ತೃಹರಿ ಸಹಚರರು ಕಪಲಾನಿ ಪಂಥಕ್ಕೆ ಸೇರಿದವರಾಗಿದ್ದರು. **"**ಈ ಪಂಥದ ಮೂಲವನ್ನು ಜಾಲಂಧರ ಉಪಪಂಥದಿಂದಲೇ ರೂಪುಗೊಂಡಿದೆ ಎಂದರೆ, ಮತ್ತೆ ಕೆಲವರು ಮೈನಾಥನಿಂದ ರೂಪಗೊಂಡಿದೆ

[15] George Weston Briggs. (1938). Gorakhnath and the Kanphata Yogis, Pp. 64

[16] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 58

[17] George Weston Briggs. (1938). Gorakhnath and the Kanphata Yogis, Pp. 65

ಎಂದು ಗುರುತಿಸುತ್ತಾರೆ".[18] ಮೈನಾಥನು ಅನಾಥನಾಗಿ ಮಿಯೋ (Meo) ಎಂಬ ಜನಾಂಗದ ಜನರಿಂದ ಪೋಷಿಸಟ್ಟನು. ನಂತರ ಗೋರಕ್ಷನಾಥನ ಶಿಷ್ಯನಾಗಿ ನಾಥಪಂಥದ ದೀಕ್ಷೆಯನ್ನು ಪಡೆದನು. ಈ ಪಂಥದ ಹೆಸರಾಂತ ಯೋಗಿಗಳೆಂದರೆ ಪ್ರೇಮಾನಾಥ ಮತ್ತು ಪೇಶಾವರದ ರತನನಾಥರು. ಪ್ರೇಮನಾಥನು ಒಂದು ಪಂಥವನ್ನು ಸ್ಥಾಪಿಸಿದನು ಎಂದು ಹೇಳಲಾಗುತ್ತದೆ.

ರತನನಾಥ ಅನುಯಾಯಿಗಳು ಮುದ್ರೆಯನ್ನು ಧರಿಸುವುದಿಲ್ಲ. ಇದಕ್ಕೆ ಒಂದು ದಂತಕಥೆಯನ್ನು ಹೇಳಲಾಗುತ್ತದೆ. ಒಮ್ಮೆ ರತನನಾಥನಿಗೆ ಕಿವಿಯೋಲೆಗಳನ್ನು ಧರಿಸಿರಲಿಲ್ಲ. ಆದ್ದರಿಂದ ಇತರ ಯೋಗಿಗಳು ಪ್ರಶ್ನಿಸಿದಾಗ, ಅವನು ತನ್ನ ಎದೆಯನ್ನು ತೆರೆದು ತನ್ನ ಹೃದಯದಲ್ಲಿ ಓಲೆಗಳನ್ನು ತೋರಿಸಿದಂತೆ. ಮತ್ತೊಮ್ಮೆ ಯಾವುದೋ ತಪ್ಪಿಗೆ ಶಿಕ್ಷೆ ವಿಧಿಸಿದಾಗ ಅವನ ಕಿವಿಯೋಲೆಗಳನ್ನು ಕಸಿದುಕೊಂಡರು. ಆಗ ಅವನು ಆ ಕಿವಿಯೋಲೆಗಳನ್ನು ತನ್ನ ಬಾಯಲ್ಲಿ ತೋರಿಸಿದನು. ರತನನಾಥನನ್ನು ಮುಸಲ್ಮಾನ ಸಮುದಾಯದವರು ಗೌರವಿಸುತ್ತಾರೆ. ಒಮ್ಮೆ ತನ್ನ ದೇಹದ ಕೊಳಕಿನಿಂದ ಅಥವಾ ಮಣ್ಣಿನಿಂದ ಗೊಂಬೆ ಮಾಡಿ ಅದಕ್ಕೆ ಜೀವ ತುಂಬಿದನು ಆ ಹುಡುಗನೇ ಕಾಯನಾಥ. ಕಾಯನಾಥನು ಮರಣ ಹೊಂದಿದಾಗ ಹಿಂದು ಮತ್ತು ಮುಸಲ್ಮಾನರು ಅವನ ದೇಹವನ್ನು ಪಡೆಯಲು ಕಿತ್ತಾಡಿದರು. ಈ ಸಂದರ್ಭದಲ್ಲಿ ಅವನ ದೇಹ ಮಾಯವಾಗಿ ಬಟ್ಟೆಗಳು ಮಾತ್ರ ಉಳಿಯಿತು. ಬಳಿಕ ಹಿಂದೂಗಳು ಇವನಿಗಾಗಿ ಸಮಾಧಿಯನ್ನು, ಮುಸಲ್ಮಾನರು ಗೋರಿಯನ್ನು ನಿರ್ಮಿಸಿದರು. ರತನನಾಥನೊಂದಿಗೆ ಸಹಚರರಾದ ಮತ್ತೊಂದು ಗುಂಪು ರಿ ಕಾಬುಲ್ ಮೇಖ್ಲಾಧಾರಿ. ಕಾಬೂಲ್ ಮತ್ತು ಜಲಾಲಾಬಾದ ಈ ಪ್ರದೇಶಗಳು ರತನನಾಥನ ಆರಾಧಿಸುವ ಪುಣ್ಯ ಕ್ಷೇತ್ರಗಳಾಗಿವೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ, ಕದ್ರಿ ಯೋಗೀಶ್ವರ ಮಠಕ್ಕೆ ಬೈರಾಗ್ ಪಂಥದ ಯೋಗಿಯನ್ನು ಪೀಠಾಧಿಪತಿಯಾಗಿ ನೇಮಿಸುವ ಸಂಪ್ರದಾಯವು ಇಂದಿಗೂ ನಡೆಯುತ್ತಿರುವುದು ಗಮನಾರ್ಹವಾದಂತಹ ಸಂಗತಿಯಾಗಿದೆ.

8. Rawal or Nagnath, **(ರಾವಲ ಅಥವ ನಾಗನಾಥಿ):** ಶಿವನ ಮೂರನೇ ಶಾಖೆಯೊಂದಿಗೆ ಈ ಪಂಥವು ಸಂಬಂಧವನ್ನು ಹೊಂದಿದೆ. ಈ ಪಂಥದಲ್ಲಿ ಮುಸಲ್ಮಾನ ಯೋಗಿಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಮುಸಲ್ಮಾನ ಯೋಗಿಗಳಲ್ಲಿ ಪ್ರಮುಖರಾದ ರಾವಲ ಯೋಗಿಗಳು ಬಹುತೇಕ ಅಲೆಮಾರಿಗಳಾಗಿದ್ದಾರೆ. ಪಂಜಾಬಿನ ಪಶ್ಚಿಮ ಜಿಲ್ಲೆಗಳಲ್ಲಿ ಇವರನ್ನು ಗುಪ್ತಶಕ್ತಿಗಳಲ್ಲಿ ನಂಬಿಕೆ ಹೊಂದಿದವರು ಎಂದು ಗುರುತಿಸಲಾಗುತ್ತದೆ. ಇವರಲ್ಲಿ ಪ್ರಮುಖವಾಗಿ ಎರಡು ಗುಂಪುಗಳಿವೆ. ಒಂದು ಮಾದಿಯ, ಈ ಗುಂಪನ್ನು ಗೋರಕ್ಷನಾಥನು ಸ್ಥಾಪಿಸಿದರು. ಎರಡನೆಯದು ಗಲ್, ಈ ವಿಭಾಗವನ್ನು ಶಿವನೊಂದಿಗೆ ಗುರುತಿಸಲಾಗಿದೆ. ಈ ಪಂಥವನ್ನು ಪಾಗಲ್ ಪಂಥ್ ಮತ್ತು ರಾಹುಲ್ ಗಲ್ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಪಾಗಲ್ ಪಂಥದವರು ಪೇಶಾವರ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಶಾಖೆಗೆ ಸೇರಿದ ಮಠವು ಹರಿಯಾಣದ ರೋಹತಕ್ ಬೋಹರ್ ನಲ್ಲಿವದೆ. ರಾವಳ ಪಿಂಡಿಯು ಇವರ ಪ್ರಮುಖ ಪವಿತ್ರ ಕ್ಷೇತ್ರವಾಗಿದೆ. ಈ ಪಂಥದ ಅನುಯಾಯಿಗಳು ಹಜಾರೊ (ಹಜಾರಾ) ಮತ್ತು ಅಫ್ಘಾನಿಸ್ತಾನದಲ್ಲಿ ಕಂಡುಬರುತ್ತಾರೆ. ಸಾಮಾನ್ಯವಾಗಿ "ರಾಹುಲ ಪಂಥದವರನ್ನು ಗೋರಕ್ಷನಾಥರ ಬಾರಹ ಪಂಥಗಳಲ್ಲಿ ಒಂದೆಂದು ಪರಿಗಣಿಸಿಲ್ಲ. ಆದರೂ ಅವರನ್ನು ಹಾಗೆ ವ್ಯಾಪಕವಾಗಿ ಪಂಥದಲ್ಲಿ ಗುರುತಿಸುವ ಸಂಪ್ರದಾಯವು ಬಂದಿದೆ" [19]. ಒಂದು

[18] ಅದೇ. ಪುಟ 65

[19] George Weston Briggs. (1938). Gorakhnath and the Kanphata Yogis, Pp. 66

ವರದಿಯ ಪ್ರಕಾರ ಇವರು ಹನ್ನೆರೆಡು ಪಂಥಗಳಲ್ಲಿ ಒಂದರಲ್ಲಿ ಅರ್ಧ ಭಾಗವಾಗಿದ್ದಾರೆ. ಉಳಿದ ಅರ್ಧವು ಪರಸನಾಥಿಗಳಿಗೆ ಸೇರಿದೆ ಎನ್ನಲಾಗುತ್ತದೆ. ಈ ರಾಹುಲ ಪಂಥದವರನ್ನು ಕಪಲಾನಿ ಪಂಥದವರು ಎಂಬುದಾಗಿಯೂ ಗುರುತಿಸಲಾಗುತ್ತದೆ.

9. Jalandharipa **(ಜಾಲಂಧರಿಪಾ)**: ಗೋರಕ್ಷ ನಾಥನಿಂದ ರೂಪಿತವಾದ ಮೂಲ ಶಾಖೆಗಳಲ್ಲಿ ಇದು ಐದನೆಯದು ಎಂದು ಗುರುತಿಸಲಾಗುತ್ತದೆ. ಈ ಪಂಥದವರು ಪಾಯೋನಾಥ ಪಂಥದರೊಂದಿಗೆ ಸಂಬಂಧವನ್ನು ಹೊಂದಿದ್ದಾರೆ. ಜಾಲಂಧರಿಪನು ಈ ಪಂಥದ ಹಿಂದಿನ ಒಂದು ಶಾಖೆಯೊಂದಿಗೆ ಸಂಬಂಧ ಹೊಂದಿದ್ದರು ಎಂಬುದು ಪರಂಪರೆಯ ನಂಬಿಕೆಯಾಗಿದೆ. ಆದಿನಾಥನ ನೇರ ಶಿಷ್ಯನಾದ "He was the founder of the 'Pa' panths as over against the 'Nath' panths"[20] . ಜಾಲಂಧರಿಪನು 'ಪಾ' ಎಂಬ ಪಂಥವನ್ನು 'ನಾಥ' ಎಂಬ ಪಂಥದ ಪ್ರತಿಯಾಗಿ ರೂಪಿಸಿದನು. 'ಪಾ' ಎಂಬ ಶಬ್ದದ ಬಳಕೆಯು ಟಿಬೆಟಿಯನ್ ಮೂಲವನ್ನು ತೋರಿಸುತ್ತದೆ. ಇದು ನಾಥಪಂಥೀಯರ ಮೇಲೆ ಪೂರ್ವದ ಪ್ರಭಾವವಿತ್ತೆದ್ದು ತೋರಿಸುತ್ತದೆ. ಕೆಲವು ನಾಥ ಯೋಗಿಗಳ ಪಟ್ಟಿಯಲ್ಲಿ ಈ ಶಾಖೆಗೆ ಕಾನಿಪ ಮತ್ತು ಗೋಪಿಚಂದ ಹೆಸರುಗಳನ್ನು ಸೇರಿಸಲಾಗಿದೆ. *"The Papnath, also known as Panath, are said to be a sub-division of Jalandharipa and followers of Mahadeo (Siva). Jalandharnath (and Kamphnath) are sometimes identified with the Aughar, while Gorakhnath and Matsyendranath are known as Kanphatas".*[21] ಇವರನ್ನು 'ಪಾಪನಾಥರು' ಅಥವಾ 'ಪಾನಾಥರು' ಎಂದು ಗುರುತಿಸಲಾಗುತ್ತದೆ. ಇವರನ್ನು ಜಾಲಂಧರಿಪರ ಉಪ ವಿಭಾಗದವರು, ಹಾಗೆಯೇ ಮಹಾದೇವನ ಅನುಯಾಯಿಗಳು ಎಂದು ಪರಿಗಣಿಸಲಾಗುತ್ತದೆ. ಜಾಲಂಧರನಾಥ ಅಥವಾ ಕಾಂಪನಾಥರನ್ನು ಕೆಲವೊಮ್ಮೆ ಔಘರ್‌ಗಳು ಎಂದು ಸೂಚಿಸುತ್ತಾರೆ. ಗೋರಕ್ಷನಾಥ ಮತ್ತು ಮತ್ಸ್ಯೇಂದ್ರನಾಥರನ್ನು ಕಾನ್ಫಟರು ಎಂದು ಗುರುತಿಸಲಾಗುತ್ತದೆ. ಜಾಲಂಧರನಾಥ ಕಾರ್ಯಕ್ಷೇತ್ರವು ಬಂಗಾಳ ಬಿಹಾರ ಪ್ರದೇಶಗಳನ್ನು ವ್ಯಾಪಿಸಿದರೆ. ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರ ಕಾರ್ಯಕ್ಷೇತ್ರವು ಪಂಜಾಬಿಗೆ ವ್ಯಾಪಿಸಿತು. ಈ ಶಾಖೆಯ ಮಠವು ಜೈಪುರದಲ್ಲಿದೆ.

10. Aipanth **(ಆಯಿಪಂಥಿ):** ಆಯಿಪಂಥ ಮೂಲ ಪ್ರವರ್ತಕರು ಭಗವತಿ ವಿಮಲಾ. ಈ ಪಂಥದ ಮೂಲ ಉಗಮ ಸ್ಥಾನ ಬಂಗಾಳದ ದಿನಾಜಪುರವೆಂದು ಗುರುತಿಸಲಾಗಿದೆ. ಜೋಗಿ ಗುಫಾ ಮತ್ತು ಗೋರಖಕುಂಯಿ ಈ ಪಂಥದವರ ಪವಿತ್ರ ಸ್ಥಳವಾಗಿದೆ. ಗೋರಕ್ಷನಾಥನ ಶಿಷ್ಯ ವಿಮಲಾದೇವಿಯು ಈ ಶಾಖೆಯನ್ನು ರೂಪಿಸಿದರು. **"**ವಿಮಲಾಮಾಯಿ ಸ್ಥಾಪಿಸಿದ ಪಂಥವಾದ್ದರಿಂದ ಮಾಯಿ ಪಂಥ ಅಥವಾ ಆಯಿ ಪಂಥ**"**[22] ಎಂಬ ಹೆಸರು ಈ ಪಂಥಕ್ಕೆ ಬಂದಿದೆ. ಈ ಪಂಥದೊಂದಿಗೆ ಗೋರಕ್ಷನಾಥರಿಂದ ರೂಪಿಸಿರುವ ಕೋಲಿನಾಥ ರೊಂದಿಗೆ ಸಂಬಂಧ ಹೊಂದಿದ್ದಾರೆ. ಅಲ್ಲದೇ ಬುಶತ್ಯೆ ಮತ್ತು ಕರಕ್ಕೈ ಪಂಗಡದೊಂದಿಗೆ ಸಂಬಂಧವನ್ನು ಹೊಂದಿದ್ದಾರೆ. ಕನಕನಾಥ ಮತ್ತು ಕಂಖನಾಥ ಎಂಬ ಹೆಸರಿನಿಂದಲೂ ಕರಕ್ಕೈ ಪಂಥದವನ್ನು ಗುರುತಿಸಲಾಗುತ್ತದೆ. ಈ ಯೋಗಿಗಳ ಅನುಯಾಯಿಗಳು ಹೇಥನಾಥ ಪಂಥದಿಂದ ಬಂದವರು ಎಂದು ಹೇಳಲಾಗುತ್ತದೆ. ಹರಿದ್ವಾರದ ಆಯಿ ಪಂಥದವರು ತಾವು ಪಾರ್ಶ್ವನಾಥರ ಅನುಯಾಯಿಗಳೆಂದು, ಆಯಿದೇವಿಯ

[20] ಅದೇ. ಪುಟ 67

[21] George Weston Briggs. (1938). Gorakhnath and the Kanphata Yogis, Pp. 67

[22] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 55

ಆರಾಧನೆಯಿಂದ ಬೇರೆಯಾಗಿ ನಿಲ್ಲುತ್ತಾರೆ. ಈ ಪಂಥದವರು ತಮ್ಮ ಮೂಲವನ್ನು ಗೋರಕ್ಷನಾಥರ ಶಿಷ್ಯೆ ಬಿಮ್ಲದೇವಿಯಲ್ಲಿ ಗುರುತಿಸಿಕೊಳ್ಳುತ್ತಾರೆ. ಆಯಿ ಎಂದರೆ ಮಾಯಿ ಇದರ ಅರ್ಥ ತಾಯಿ ಅಥವಾ ದೇವತೆಯಾಗಿದೆ. ಇಲ್ಲಿನ ಯೋಗಿಗಳು ತಮ್ಮ ಹೆಸರಿನ ಮುಂದೆ 'ನಾಥ' ನಾಮದ ಬದಲು 'ಆಯಿ' ಎಂಬ ನಾಮ ಸೇರಿಸಿಕೊಳ್ಳುತ್ತಾರೆ. ನರಮಾಯಿಜಿ ಎಂಬ ನಾಥಿಯ ನಂತರ ಐದು ತಲೆಮಾರಿನವರೆಗೂ ಇವರು 'ಆಯಿ' ಎಂಬ ನಾಮವನ್ನೇ ಬಳಸಿಕೊಂಡರು. ಆನಂತರದಲ್ಲಿ ನಾಥ ಎಂಬ ನಾಮವನ್ನು ತಮ್ಮ ಹೆಸರನೊಂದಿಗೆ ಬಳಸಲು ಆರಂಭಿಸಿದರು. "ಮೈನಾಥಿಗಳು ಬಹುಶಃ ಇದೇ ಗುಂಪಿನಿಂದ ಉದ್ಭವಿಸಿದರು"[23] ಎಂಬ ಅಭಿಪ್ರಾಯವಿದೆ. ನರಮಾಯಿಜಿ ನಂತರ ಬಂದ ಮಸ್ತನಾಥರ ಕಾಲಘಟ್ಟದಲ್ಲಿ ಇಲ್ಲಿನ ಯೋಗಿಗಳನ್ನು ನಾಥರು ಎಂದು ಗುರುತಿಸುವ ಸಂಪ್ರದಾಯವು ರೂಢಿಯಾಯಿತು. ನರಮಾಯಿಜಿ ಶಿಷ್ಯರಾದ ಮಸ್ತನಾಥರು ಗೋರಕ್ಷನಾಥರ ಸಮಕಾಲೀನರು ಎನ್ನಲು ಸಾಧ್ಯವಿಲ್ಲ. ಇತ್ತೀಚಿನ ಕಾಲದಲ್ಲಿಷ್ಟೆ ನಾಥ ಪಂಥದೊಂದಿಗೆ ಈ ಯೋಗಿಗಳು ಗುರುತಿಸಿಕೊಂಡಿದ್ದಾರೆ.

ಇವರು ಒಂದು ವಕ್ರಕೋಲನ್ನು ತಮ್ಮ ತೋಳಿನ ಊರುಗೋಲಾಗಿ ಬಳಸುತ್ತಾರೆ. ಬಾವ ಎಂಬ ವಿಭಾಗವು ಮಸ್ತನಾಥರ ಮೂಲಕ ಆಯಿ ಪಂಥಕ್ಕೆ ಸೇರಿದರು. ನಾಥ ಪಂಥದ ಉಪಪಂಥ ರಚನೆಯ ಸಂದರ್ಭದಲ್ಲಿ ಆಯಿ ಪಂಥವು ದ್ವಾದಶ ಅಥವಾ ಬಾರಹ ಪಂಥದಲ್ಲಿ ಸೇರಿಸಲಾಯಿತು. ಇದು ಗೋರಕ್ಷನಾಥರ ಮರಣದ ನಂತರದ ಕಾಲಘಟ್ಟದಲ್ಲಿ ನಡೆದ ಸಂಘಟನೆಯಾಗಿದೆ. ಮಸ್ತನಾಥರನ್ನು ನೋಡಲು ಬಂದ ಶಿಷ್ಯನು ಸೊಂಟಕ್ಕೆ ಕಟ್ಟುವ ಬಟ್ಟೆಯನ್ನು ಮಾತ್ರ ಧರಿಸಿದ್ದನು. ಮಸ್ತನಾಥನು ಕೋಪಕೊಂಡು ಅವನು ಜೀವನ ಪೂರ್ತಿ ಬೆತ್ತಲೆಯಾಗಿರಬೇಕು ಎಂಬ ಶಾಪ ನೀಡಿದನು. ಆ ಶಾಪದ ಯೋಗಿಗಳೇ ನಾಗ ಸಾಧುಗಳಾದರು. ಮಸ್ತನಾಥ ಅನುಯಾಯಿಗಳಲ್ಲಿ ಎರಡು ಗುಂಪುಗಳಿವೆ. ಮೊದಲ ಗುಂಪು ಬರಿ ದರ್ಗಾ. ಇವರು ಮಾಂಸ ಮತ್ತು ಮಧ್ಯ ಮಾಂಸದ ಸೇವನೆ ನಿಷೇಧಿಸಿದರು. ಮತ್ತೊಂದು ಭೋಪ್ ದರ್ಗಾ ಇವರು ಮಾಂಸ ಮತ್ತು ಮಧ್ಯಗಳನ್ನು ಸೇವಿಸುವರು. ಭೋಪ್ ದರ್ಗಾ ಶಾಖೆಯನ್ನು ಮಸ್ತನಾಥನ ಶಿಷ್ಯ ಚಮರ್ ಸ್ಥಾಪಿಸಿದನು. ಈ ಪಂಥದ ಕೆಳವರ್ಗ ಜನರನ್ನು ಚಮಾರ್ವ ಎಂದು ಕರೆಯಲಾಗುತ್ತದೆ. ಮಸ್ತನಾಥರ ಮುಖ್ಯ ಮಠವು ರೋಹ್ತಕನ ಬೋಹರ್ ಎಂಬ ಸ್ಥಳದಲ್ಲಿದೆ. ಈ ಮಠವನ್ನು ನರಮಾಯಿಜಿ ಸ್ಥಾಪಿಸಿದರು. ಈ ಮಠದಲ್ಲಿ ಯಾವುದೇ ವಿಗ್ರಹಗಳಿಲ್ಲ. ಹರಿದ್ವಾರದಲ್ಲಿ ಆಯಿ ಪಂಥದ ಪ್ರಮುಖ ಮಠಗಳಿವೆ ಆಯಿ ಪಂಥದವರು ಪಂಜಾಬಿನ ಹಣಪತ್ ಮಧಾತಾ ಮತ್ತು ಚಮಾರ್ ಎಂಬ ಸ್ಥಳಗಳಲ್ಲಿ ಪ್ರಮುಖ ಮಠಗಳನ್ನು ಹೊಂದಿದ್ದಾರೆ.

11. Kaphani **(ಕಪಲಾನಿ):** ಗೋರಕ್ಷನಾಥರ ಶಿಷ್ಯ ಕಪಿಲ ಮುನಿ ಈ ಶಾಖೆಯ ಮೂಲ ಸ್ಥಾಪಕ. ಬಂಗಾಲ ಪ್ರಾಂತ್ಯದಲ್ಲಿ ಈ ಪಂಥ ಉಗಮವಾಯಿತು. ಇವರ ಪವಿತ್ರ ಸ್ಥಳ ಮಂಗಾಸಾಗರ. "ಸಧ್ಯದಲ್ಲ ಡಮಡಮ ಸಮೀಪದ ಗೋರಖಬಂಸಿ ಇವರ ಪ್ರಮುಖ ಕೇಂದ್ರವಾಗಿದೆ"[24]. ಚಂದನಾಥರ ಉಪ ಶಾಖೆಗಳನ್ನು ಈ ಪಂಥವು ಒಳಗೊಂಡಿದೆ. "ಕಪಿಲಾಮುನಿ ಸ್ಥಾಪಿಸಿದರು ಎಂಬ ಅಭಿಪ್ರಾಯದ ನಡುವೆ ಗೋರಕ್ಷನಾಥರ ಅನುಯಾಯಿ ಅಜಯ್ ಪಾಲ್ ಸ್ಥಾಪಿಸಿದರೆಂಬ ಹೇಳಿಕೆಯು ಇದೆ".[25] ಈ ಪಂಥವನ್ನು ಕಪಿಲ್ ಅಥವಾ ಕಪಿಲ್ ದೇವಕೆ ಎಂಬ

[23] George Weston Briggs. (1938). Gorakhnath and the Kanphata Yogis. Pp. 67

[24] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 58

[25] George Weston Briggs. (1938). Gorakhnath and the Kanphata Yogis. Pp. 69

ಹೆಸರಿನಿಂದಲೂ ಕರೆಯಲ ಕರೆಯುತ್ತಾರೆ. ನೀಮ್ ನಾಥಿ ಎಂಬ ಗುಂಪು ಈ ಶಾಖೆಯಲ್ಲಿ ಸೇರಿಕೊಂಡಿದೆ. ನೀಮ್ ನಾಥಿಯರನ್ನು ಗಪ್ಲಾನಿ ಮತ್ತು ಕೈಶಿಕಿ ಎಂದು ಕರೆಯುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶ ಕಪಲಾನಿ ಪಂಥದವರು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರಿನಲ್ಲಿರುವ ಕದ್ರಿ ಶ್ರೀ ಯೋಗೀಶ್ವರ ನಾಥಮಠಕ್ಕೆ ಮಠಾಧಿಪತಿಯಾಗಿ ನೇಮಕವಾಗುವ ಅಧಿಕಾರ ಹೊಂದಿದ್ದಾರೆ.

12. Dhajjanath **(ಧ್ವಜನಾಥಿ)** : ಈ ಪಂಥದ ಮೂಲಪುರುಷ ಮಹಾವೀರ ಹನುಮಾನ ಎಂಬ ಅಭಿಪ್ರಾಯವಿದೆ. ಹನುಮಾನನೊಂದಿಗೆ ಸಂಬಂಧವನ್ನು ಹೇಳಲಾಗುತ್ತದೆ. ಈ ಪಂಥವು ಹಳೆಯ ಗೋರಕ್ಷನಾಥಿ ಪಟ್ಟಿಯಲ್ಲಿ ಆರನೆಯ ಪಂಥವಾಗಿದೆ. ಬಾರಹ ಪಂಥದಲ್ಲಿ ಇದು ಕೂಡ ಒಂದು. ಈ ಪಂಥದ ಸದಸ್ಯರು ಧ್ವಜವನ್ನು ಹೊತ್ತಿರುತ್ತಾರೆ ಎಂಬ ಅಭಿಪ್ರಾಯವಿದೆ. ಈ ಯೋಗಿಗಳನ್ನು ಪೇಶಾವರ್ ಹಾಗೂ ಅಂಬಾಲಾ ಎಂಬ ಪ್ರದೇಶಗಳಲ್ಲಿ ಕಾಣಬಹುದು.

13. Kanipa **(ಕಾನಿಪಾ)**: ಮೂಲಪುರುಷ ಜಾಲಂಧರರ ಶಿಷ್ಯ ಗಣಿತ ಕಾನಿಪಾ. ನಾಥ ಸಂಪ್ರದಾಯದಲ್ಲಿ ನವನಾಥರು ಎಂದು ಪರಿಗಣಿಸುವ ಪಟ್ಟಿಯಲ್ಲಿ ಕಾನಿಪಾನಾಥನ ಹೆಸರನ್ನು ಕೂಡ ಕಾಣಬಹುದಾಗಿದೆ. ಜಾಲಂಧರನ ಗೋಪಿಚಂದನಿಂದ ಉಜ್ಜಯಿನಿಯಲ್ಲಿ ಬಂದಿದ್ದನಾದನು. ಆ ಸಂದರ್ಭದಲ್ಲಿ ಗೋರಕ್ಷನಾಥ ಮತ್ತು ಮತ್ಸ್ಯೇಂದ್ರನಾಥರ ಜಾಲಂಧರನಾಥನನ್ನು ರಕ್ಷಿಸಿದರು. ಮುಂದೆ ಕಾನಿಪಾನು ತನ್ನ ಗುರುವಿನ ಮಹಂತ ಸ್ಥಾನವನ್ನು ಪಡೆದನು. ನಂತರ ತನ್ನ ಹೆಸರಿನಲ್ಲಿಯೇ ಒಂದು ಪಂಥವನ್ನು ಆರಂಭಿಸಿದನು. ಈ ಶಾಖೆಗೆ ಗೋಪಿಚಂದನು ಸೇರಿಕೊಂಡನು. ಗೋಪಿಚಂದನನ್ನು ಸಿದ್ಧ ಸಿಂಗರಿ ಎಂದು ಗುರುತಿಸಲಾಯಿತು. ಬಳಿಕ ಗೋಪಿಚಂದನು 84 ಸಿದ್ಧರಲ್ಲಿ ಒಬ್ಬನಾದನು. ಗೋಪಿಚಂದನ ಹೆಸರನ್ನು ಒಂದು ಪಂಥದ ಹೆಸರಾಗಿಯೂ ಕಾಣಬಹುದು. ಇಲ್ಲದೇ ಗೋಪಿಚಂದ ಮತ್ತು ಕಾನಿಪಾ ಜಾಲಂಧರನ ಇವರಿಬ್ಬರ ಶಿಷ್ಯನೆಂದು ಗುರುತಿಸಲ್ಲಾಗುತ್ತದೆ. ಸಿದ್ಧ ಶೃಂಗಾರಿ (ಸಂಗರಿ) ಎಂಬ ಶಾಖೆಗೆ ಬಂಗಾಳದ ಸ್ವಧ ಸಮುದಾಯವನ್ನು ಸೇರಿಸಲಾಗುತ್ತದೆ. ಅವರು ಹಾವುಗಳನ್ನು ಸಾಕುವ ಪ್ರವೃತ್ತಿಯವರು. ಈ ಪಂಥ ದೀಕ್ಷೆ ಪಡೆದ ಇಸ್ಮಾಯಿಲ್ ಮುಂದೆ ಒಂದು ಪಂಥದ ಸ್ಥಾಪಕನಾದನು. ಇವನ ಅನುಯಾಯಿಗಳನ್ನು ಕಬೇಲಿಯರು ಎಂದು ಕರೆಯಲಾಗುತ್ತದೆ. ಇದೆ ಪರಂಪರೆಗೆ ಸೆಪಾಲ ಎಂಬ ಜನಾಂಗವು ಸೇರುತ್ತದೆ. ಇವರು ಕೂಡ ಹಾವುಗಳನ್ನು ಸಾಕುತ್ತಾರೆ. ಕಿವಿಯೋಲೆಗಳನ್ನು ಧರಿಸುತ್ತಾರೆ. ಸಾಮಾನ್ಯವಾಗಿ ಕಾನಿಪಾರನ್ನು ಹನ್ನೆರಡು ಪಂಥಗಳಲ್ಲಿ ಒಂದು ಪಂಥವೆಂದು ಪರಿಗಣಿಸುವುದಿಲ್ಲ. ಆದರೆ ಅರ್ಧ ಉಪಪಂಥದಲ್ಲಿ ಈ ಪಂಥ ಗುರುತಿಸಲಾಗುತ್ತದೆ. ಆದರೆ ಈ ಅಭಿಪ್ರಾಯವನ್ನು ಎಲ್ಲರೂ ಒಪ್ಪುವುದಿಲ್ಲ. ಬಾ ಮಾರ್ಗ ಎಂಬ ಪಂಥವು ಅಂದರೆ ಎಡ ಕೈ ಪಂಥ ಎಂದು ಕರೆಯಲಾಗುವ ಪಂಥವು ಕಾನಿಪಾನಿಂದಲೇ ಬಂದಿರುವುದು ಎನ್ನಲಾಗಿದೆ. ಶಕ್ತಿ ಆರಾಧನೆಯು ಈ ಪಂಥದಲ್ಲಿ ಗಮನಾರ್ಹವಾದ ಅಂಶವಾಗಿದೆ. ಬಂಗಾಳ ಮತ್ತು ಅಸ್ಸಾಮಿ ಪ್ರದೇಶದಲ್ಲಿ ಶಕ್ತಿ ಪೂಜೆಯೂ ಇದೇ ಪಂಥದವರಿಂದ ನಡೆಯುತ್ತದೆ. "ಇದು ವಾಮಾಚಾರಿ ಪಂಥವಾಗಿರುತ್ತದೆ ಎಂದು ಹೇಳಲಾಗುತ್ತದೆ".[26]

ಈ ಪ್ರಮುಖ ಶಾಖೆಗಳಿಗೆ ಜೊತೆಗೆ ಅನೇಕ ಸಣ್ಣ ಪ್ರಮಾಣದ ಶಾಖೆಗಳು ನಾಥ ಪರಂಪರೆಯಲ್ಲಿದೆ. ಹಾಂಡಿ ಭರಂಗ, ಮಾನನಾಥ, ಕಾಯಿಕನಾಥಿ, ಪಾಯಲ ನಾಥಿ, ಉದಯ ನಾಥಿ, ಆರಯ ನಾಥಿ, ಪೀಲನಾಥಿ, ಚರ್ಪಟನಾಥಿ, ಗಹನೀನಾಥಿ, ನಿರಂಜನನಾಥಿ, ವರಂಜೋಗಿ, ನಾಯರೀ ಅಮರನಾಥ, ರೇವನಾಥ, ಕುಂಭೀದಾಸ, ತಾರಕನಾಥ

[26] ರಾಮಚಂದ್ರ ಚಿಂತಾಮಣ ಢೇರೆ. (2024). ನಾಥ ಸಂಪ್ರದಾಯದ ಇತಿಹಾಸ. ಪುಟ. 55

ಅಮಾಪಂಥಿ, ಶೃಂಗನಾಥ ಇತ್ಯಾದಿ ಶಾಖೆಗಳನ್ನು ಬ್ರಿಗ್ಸ್ ಉಲ್ಲೇಖಿಸಿದ್ದಾರೆ.

ಗುರು ಪರಂಪರೆಯೊಂದಿಗೆ ಆರಂಭವಾದ ನಾಥಪಂಥವು ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರ ಪರಿಶ್ರಮದಿಂದ ವಿವಿಧ ದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿತು. ಅಂದಿನ ಸಮಾಜದಲ್ಲಿದ್ದ ಮಾಟ, ಮಂತ್ರ, ತಂತ್ರ ಎಂಬ ಭೀಕರವಾದ ವಾಮಮಾರ್ಗ ಪರಿಸ್ಥಿತಿಯಿಂದ ಆಧ್ಯಾತ್ಮಿಕ ಸಮಾಜವನ್ನು ಶುದ್ಧೀಕರಿಸಿದ ಕೀರ್ತಿ ಗೋರಕ್ಷನಾಥರಿಗೆ ಸಲ್ಲುತ್ತದೆ. ಗೋರಕ್ಷನಾಥರ ವಿಚಾರಧಾರೆಗೆ ಸಮಾಜದ ಎಲ್ಲಾ ವರ್ಗದ ಜನರು ಮನಸೋತರು. ನಂತರ ನಾಥಪಂಥದ ಅನುಯಾಯಿಗಳಾಗಿ ರೂಪಿತರಾದರು. ಹೀಗೆ ರೂಪುಗೊಂಡ ಅನುಯಾಯಿಯ ಗುಂಪುಗಳು ಗೋರಕ್ಷನಾಥರ ಮರಣ ನಂತರ ತಮ್ಮದೇ ಆದ ವಿಚಾರಧಾರೆಯೊಂದಿಗೆ ವಿವಿಧ ಕವಲುಗಳಾದವು. ಇವೆ ಮುಂದೆ ದ್ವಾದಶ ಪಂಥ ಅಥವಾ ಬಾರಹ ಪಂಥದ ಉದಯಕ್ಕೆ ಪ್ರೇರಣೆಯಾದವು. ನಾಥಪಂಥವು ಪ್ರಾದೇಶಿಕವಾಗಿ ವಿವಿಧ ಪಂಥಗಳಾಗಿ ತನ್ನ ವಿಸ್ತಾರತೆಯನ್ನು ಹೆಚ್ಚಿಸಿಕೊಂಡಂತೆ ಕಾಣುತ್ತದೆ. ಇದಲ್ಲದೆ ಗುರು ಪರಂಪರೆಯ ಅನುಯಾಯಿಗಳಾದ ನಾಥಯೋಗಿಗಳು ತಮ್ಮ ಗುರುವಿನ ಹೆಸರಿನಲ್ಲಿ ಈ ಪಂಥಗಳನ್ನು ಆರಂಭಿಸಿದ್ದಾರೆ. ಗೋರಕ್ಷನಾಥ ಅವಧಿಯ ನಂತರ ವಿವಿಧ ಚಿಂತನೆಗಳು, ಪ್ರಾದೇಶಿಕ ವೈವಿಧ್ಯತೆಗಳು ಇಂತಹ ಶಾಖೆಯ ಉದಯಕ್ಕೆ ಪ್ರೇರಣೆಯಾಗಿರಬಹುದು. ಈ ಪಂಥಗಳ ವಿಕಾಸವು ನಾಥ ಪಂಥವನ್ನು ಜನಸಮುದಾಯಗಳ ಮನದಲ್ಲಿ ನಿಲ್ಲುವಂತೆ ಮಾಡಿವೆ. ಕರ್ನಾಟಕದಲ್ಲಿರುವ ನಾಥ ಮಠಗಳಿಗೆ ಈ ಬಾರಹ ಪಂಥದ ಯೋಗಿಗಳೇ ಪೀಠಾಧಿಪತಿಗಳಾಗಿ ನೇಮಕಗೊಳ್ಳುತ್ತಾರೆ. ಕರ್ನಾಟಕದ ನಾಥ ಪಂಥದ ಮಠಗಳಿಗೆ ಪೀಠಾಧಿಪತಿಗಳಾಗುವ ದ್ವಾದಶ ಪಂಥಗಳೆಂದರೆ ಸತ್ಯನಾಥಿ, ಧರ್ಮನಾಥಿ, ರಾಮನಾಥಿ, ನಾಟೇಶ್ವರಿ, ಕಪಲಾನಿ, ಭರ್ತೃಹರಿ, ರಾವುಲ, ಗಂಗಾನಾಥಿ, ಆಯಿ ಪಂಥ, ದರಿಯಾನಾಥಿ, ಪಾಗಲ್ ಪಂಥ, ಪಾವು ಪಂಥ. ಕರ್ನಾಟಕದಲ್ಲಿರುವ ನಾಥ ಮಠಗಳಿಗೆ ಈ ದ್ವಾದಶ (ಬಾರಹ) ಪಂಥದ ಯೋಗಿಗಳೇ ಪೀಠಾಧಿಪತಿಗಳಾಗಿ ನೇಮಕವಾಗುವ ಅಧಿಕಾರವಿದೆ. ಮತ್ತೆ ಯಾವ ಪಂಥದವರು ಈ ಮಠಗಳಿಗೆ ಪೀಠಾಧಿಪತಿಯಾಗುವ ಅಧಿಕಾರವಿರುವುದಿಲ್ಲ. ಈ ಪರಂಪರೆಯೂ ಇಂದಿಗೂ ಪಾಲಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಇದುವರೆಗೂ ಇಲ್ಲಿನ ಯಾವ ಮಠಗಳಲ್ಲಿಯೂ ಈ ನಿಯಮ ಅಥವಾ ಸಂಪ್ರದಾಯದ ಉಲ್ಲಂಘನೆ ನಡೆದಿಲ್ಲ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿ ಶ್ರೀ ಯೋಗೀಶ್ವರ ಮಠಕ್ಕೆ 'ಕಪಲಾನಿ, ಗಂಗಾನಾಥಿ, ಬೈರಾಗಿ ಹಾಗೂ ದರಿಯಾನಾಥಿ' ಎಂಬ ನಾಲ್ಕು ಶಾಖೆಗಳಿಗೆ ಸೇರಿದ ಯೋಗಿಗಳನ್ನು ಮಾತ್ರ ಪೀಠಾಧಿಪತಿಗಳಾಗುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮತ್ತೊಂದು ನಾಥ ಮಠವಾದ ವಿಟ್ಲ ಮಠಕ್ಕೆ 'ಸತ್ಯನಾಥಿ' ಶಾಖೆಯ ಯೋಗಿಗಳನ್ನು ಮಾತ್ರ ನೇಮಕ ಮಾಡುತ್ತಾರೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಯಡಮೊಗೆಯ ಶ್ರೀ ಕ್ಷೇತ್ರ ಸಿದ್ಧಪೀಠ ಕೊಡಚಾದ್ರಿ ಹಲವರಿ ಮಠಕ್ಕೆ ಧರ್ಮನಾಥಿ ಪಂಥದ ಯೋಗಿಗಳನ್ನು ಪೀಠಾಧಿಪತಿಯಾಗಿ ನೇಮಿಸುವ ಪರಂಪರೆಯಿದೆ. ಇದಲ್ಲದೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿ ಶ್ರೀ ಯೋಗೀಶ್ವರ ಮಠಕ್ಕೆ ಇದೇ ಧರ್ಮನಾಥಿ ಪಂಥದ ಯೋಗಿಗಳನ್ನು ಪೀಠಾಧಪತಿಯಾಗಿ ನೇಮಿಸಲಾಗುತ್ತದೆ. ಬೆಳಗಾವಿ ಜಿಲ್ಲೆಯ ಶ್ರೀ ಸಿದ್ಧ ಮಚ್ಚೇಂದ್ರನಾಥ ದಾದಾ ಕಾ ಮಠಕ್ಕೆ ರಾಮನಾಥಿ ಪಂಥ, ಶ್ರೀ ಗುರು ಗೋರಕ್ಷನಾಥ ಮಠಕ್ಕೆ ನಾಟೇಶ್ವರಿ ಪಂಥ, ಶ್ರೀ ಸಿದ್ಧ ಹಂಡಿಬಡಗನಾಥ ಮಠಕ್ಕೆ ಪಾವು ಪಂಥ, ಬಾಲಕನಾಥ ಮಠಕ್ಕೆ ಕಪಲಾನಿ ಪಂಥದ ನಾಥ ಯೋಗಿಗಳು ಸಂಪ್ರದಾಯದಂತೆ ನೇಮಕ ನಡೆಯುತ್ತದೆ. ಹಾವೇರಿ ಜಿಲ್ಲೆಯ ಕರಜಗಿ ಶ್ರೀ ಸಿದ್ಧ ಭಾವನ ಮಠಕ್ಕೆ ಆಯಿ ಪಂಥದ ಯೋಗಿಗಳು ನೇಮಕಗೊಳ್ಳುತ್ತಾರೆ. ಹೀಗೆ ನಾಥ ಪಂಥ

ಅಸ್ತಿತ್ವದಲ್ಲಿರುವ ಎಲ್ಲಾ ಮಠಗಳಿಗೂ ದ್ವಾದಶ ಪಂಥದ ಯೋಗಿಗಳನ್ನೆ ಪೀಠಾಧಿಪತಿಯಾಗಿ ಪರಿಗಣಿಸಲಾಗುತ್ತದೆ. ನಾಥಪಂಥದಲ್ಲಿ ದ್ವಾದಶ ಪಂಥಗಳಿದ್ದರೂ ಅವುಗಳಲ್ಲಿರುವ ಆಧ್ಯಾತ್ಮಿಕ ನಿಲುವು ಆಚರಣೆ ಎಲ್ಲವೂ ಕೂಡ ಒಂದೇ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಇದು ನಾಥಪಂಥದ ಸತ್ವಕ್ಕೆ ಸಾಕ್ಷಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಕೃಷ್ಣಮೂರ್ತಿ, ಮ. ಸು. (2010). *ಸಿದ್ಧ ಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಹಮತ್ ತರೀಕೆರೆ. (2021). *ಕರ್ನಾಟಕದ ನಾಥಪಂಥ.* ಅಭಿನವ ಪ್ರಕಾಶನ.
- ರಾಜೇಶ್ವರಿ ಗೌಡ, ಕೆ. (2001). *ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ.* ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ.
- ರಾಮಚಂದ್ರ, ಡಿ.ಸಿ. (2025). *ನಾಥ ಪರಂಪರೆ.* ಕನ್ನಡ ಅಭಿವೃದ್ಧಿ ಪ್ರಾಧಿಕಾರ.
- ರಾಮಚಂದ್ರ ಚಿಂತಾಮಣಿ ಢೇರೆ, (ಮೂಲ: ಮರಾಠಿ) (2024). ನಾಥ ಸಂಪ್ರದಾಯದ ಇತಿಹಾಸ, (ಅನು, ಚಂದ್ರಕಾಂತ ಪೋಕಳೆ) ಸ್ನೇಹ ಪ್ರಿಂಟರ್ಸ್.
- ಶ್ರೀಧರ್, ಹೆಚ್. ಜಿ. (2021). *ನಾಥಪಂಥ.* ಕನ್ನಡ ಸಾಹಿತ್ಯ ಅಕಾಡೆಮಿ.
- George Weston Briggs. (1938). Gorakhnath and the Kanphata Yogis. Y.M.C.A. Publishing House.